# ಮೂರನೇ ಆಸ್ಕರ್?



ಅಲ್ಲಾ ರಖಾ ರೆಹಮಾನ್ ತನ್ನ ಸಂಗೀತಕ್ಕಾಗಿ ಮೂರನೇ ಬಾರಿಗೆ ಆಸ್ಕರ್ ಪ್ರಶಸ್ತಿಯನ್ನು ಗೆಲ್ಲಬಹುದೆ.. ಎನ್ನುವುದೀಗ ಎಲ್ಲರ ಕುತೂಹಲ ಕೆರಳಿಸಿರುವ ಪ್ರಶ್ನೆ. ರೆಹಮಾನ್ ಅಭಿಮಾನಿಗಳಂತೂ 'ಖಂಡಿತಾ ಗೆಲ್ಲುತ್ತಾರೆ' ಎಂಬ ಆತ್ಮವಿಶ್ವಾಸದಲ್ಲಿದ್ದಾರೆ. ಏಕೆಂದರೆ ರೆಹಮಾನ್ ಸಂಗೀತ ನೀಡಿದ ಮೂರು ಸಿನಿಮಾಗಳು ಈ ಸಲ 'ಆಸ್ಕರ್'ನ ಸಂಭಾವ್ಯ ಪಟ್ಟಿಯಲ್ಲಿವೆ. 'ದಿ ಹಂಡ್ರೆಡ್ ಫೂಟ್ ಜರ್ನೀ', 'ಮಿಲಿಯನ್ ಡಾಲರ್ ಆರ್ಮ್' ಮತ್ತು ತಮಿಳಿನ 'ಕೋಚಡ್ಯೆಯನ್'– ಈ ಮೂರರಲ್ಲೂ ರೆಹಮಾನ್ ನೀಡಿದ ಒರಿಜಿನಲ್ ಸಂಗೀತವಿದೆ. ಒಟ್ಟು 114 ಸಿನಿಮಾಗಳನ್ನು ಅಂತಿಮವಾಗಿ ಪಟ್ಟಿ ಮಾಡಲಾಗಿದ್ದು, ಇವುಗಳಲ್ಲಿ ಆಸ್ಕರ್ ಸ್ಪರ್ಧೆಗೆ ನಾಮಕರಣ ಆಗಲಿರುವ ಸಿನಿಮಾಗಳನ್ನು ಜನವರಿ 15ರಂದು ಪ್ರಕಟಿಸಲಾಗುವುದು. ಜನವರಿ 22ರಂದು ನಡೆಯಲಿರುವ ಅಕಾಡೆಮಿ ಸಮಾರಂಭದಲ್ಲಿ ಆಸ್ಕರ್ ಪ್ರಶಸ್ತಿ ಘೋಷಣೆಯಾಗಲಿದೆ.

ಇವುಗಳಲ್ಲಿ ಎರಡು ಬಾಲಿವುಡ್ ಸಿನಿಮಾಗಳಾದರೆ, ಇನ್ನೊಂದು ರಜನೀಕಾಂತ್ ಅಭಿನಯದ ತಮಿಳು ಸಿನಿಮಾ. ಈ ಮೂರರಲ್ಲಿ 'ದಿ ಹಂಡ್ರೆಡ್ ಫೂಟ್ ಜರ್ನೀ'ಯ 'ಅಫ್ರೀನ್' ಹಾಡಿನ ಬಗ್ಗೆ ಹೆಚ್ಚು ಒಲವು ಕಾಣಿಸುತ್ತಿದೆ. ಹಿಂದೆ ಡ್ಯಾನಿ ಬಾಯ್ಲ್‌ನ 'ಸ್ಲಂಡಾಗ್ ಮಿಲಿಯನೇರ್' ಚಿತ್ರದಲ್ಲಿ ಕಂಪೋಸರ್ ರೆಹಮಾನ್ 'ಜೈ ಹೋ' ಹಾಡಿಗೆ ಆಸ್ಕರ್ ಪ್ರಶಸ್ತಿ ಗೆದ್ದಿದ್ದರು. ಆ ಹಾಡಿಗೆ ಖ್ಯಾತ ಚಿತ್ರಸಾಹಿತಿ ಗುಲ್ಜಾರ್ ಸಾಹಿತ್ಯ ನೀಡಿದ್ದರು. ಆ ಸಾಹಿತ್ಯಕ್ಕೂ ಆಸ್ಕರ್ ಪ್ರಶಸ್ತಿ ಸಿಕ್ಕಿತ್ತು. ಈಗ ಆಫ್ರೀನ್ ಹಾಡಿಗೂ ಗುಲ್ಜಾರ್ ಅವರೇ ಸಾಹಿತ್ಯ ಬರೆದಿದ್ದು, ಈ ಜೋಡಿ ಮತ್ತೆ 'ಮ್ಯಾಜಿಕ್' ಮಾಡುವ ನಿರೀಕ್ಷೆ ಗರಿಕೆದರಿದೆ.

11ರ ಎಳವೆಯಲ್ಲೇ ಆರ್ಕೆಸ್ಟ್ರಾ ತಂಡಕ್ಕೆ ಪ್ರವೇಶ ಪಡೆದವರು ರೆಹಮಾನ್. ತಮ್ಮ ತಂದೆಯ ಸ್ನೇಹಿತ ಮಲಯಾಳಂ ಕಂಪೋಸರ್ ಎಂ.ಕೆ.ಅರ್ಜುನನ್ ಮೊದಲ ಗುರು. ಡ್ರಮ್‌ನಿಂದ ಗಿಟಾರ್, ಕೀಬೋರ್ಡ್, ಪಿಯಾನೊ ಎಂದೆಲ್ಲ ಕೈಯಾಡಿಸಿದ ರೆಹಮಾನ್, ಹಾಡಲು ತೊಡಗಿದ್ದು ಆ ಬಳಿಕ. ಆರಂಭದಲ್ಲಿ ರೇಡಿಯೊ, ಟೀವಿ ಜಾಹೀರಾತುಗಳ ಜಿಂಗಲ್ಸ್ ರೂಪಿಸುತ್ತಿದ್ದ ರೆಹಮಾನ್, ಈಗಲೂ ಆಲ್ವಿನ್ ವಾಚ್‌ನ ಜಿಂಗಲ್ಸ್ ನೆನಪಿಸಿಕೊಳ್ಳುತ್ತಾರೆ. ಈಗಂತೂ ರೆಹಮಾನ್ ಎಂದರೆ ಜಾಗತಿಕ ಸಂಗೀತಗಾರ. ಸಿಡ್ನಿ, ನ್ಯೂಯಾರ್ಕ್, ಲಂಡನ್, ಸಿಂಗಾಪುರ– ಎಂದು ಕೆಲಸದ ಮೇಲೆ ಸದಾ ಹಾರಾಡುತ್ತಿರುವ ರೆಹಮಾನ್, ಈಗ ಸಂಗೀತ ಯೋಜಿಸಲು ಬುಕ್ ಆದರೆ, ಕೆಲಸ ಮುಗಿಯುವುದು ಮುಂದಿನ ವರ್ಷ! ಅಷ್ಟೊಂದು ಬ್ಯುಸಿ. ಮದ್ರಾಸ್‌ನಲ್ಲಿ ಇರುವಾಗಲೇ ಲಂಡನ್ನಿನ ಟ್ರಿನಿಟಿ ಕಾಲೇಜಿನಿಂದ ಸ್ಕಾಲರ್‌ಶಿಪ್ ಪಡೆದು, ಟ್ರಿನಿಟಿ ಮ್ಯೂಸಿಕ್ ಸ್ಕೂಲ್‌ನಿಂದ ವೆಸ್ಟರ್ನ್ ಕ್ಲಾಸಿಕಲ್ ಮ್ಯೂಸಿಕ್‌ನಲ್ಲಿ ಡಿಪ್ಲೊಮಾ ಪದವಿ ಪಡೆದ ರೆಹಮಾನ್, ಈಗ ವಿಶ್ವದ ಎಲ್ಲ ಮಾದರಿಯ ಸಂಗೀತಗಳನ್ನೂ ಪ್ರಯೋಗಕ್ಕೆ ಒಳಪಡಿಸುತ್ತಿದ್ದಾರೆ. ಹಾಗೆಂದೇ ಅವರ ಎರಡೂ ಸಲದ ವಿಶ್ವ ಪ್ರವಾಸದಲ್ಲಿ ಸಿಡ್ನಿ, ನ್ಯೂಯಾರ್ಕ್‌ನಂತೆಯೇ ದುಬೈಯಲ್ಲೂ ಸಹಸ್ರಾರು ಅಭಿಮಾನಿಗಳನ್ನು ಗಳಿಸಿಕೊಂಡಿದ್ದಾರೆ.

ತಮಿಳು, ಹಿಂದಿ ಸಿನಿಮಾಗಳಿಂದ ಮೇಲಕ್ಕೆ ಚಿಮ್ಮಿ ಹಾಲಿವುಡ್ ಸಿನಿಮಾ ನಿರ್ಮಾಪಕರಿಗೂ ಪ್ರಿಯವಾಗಿರುವ ರೆಹಮಾನ್, ವಿಶ್ವಖ್ಯಾತಿ ಪಡೆದಿದ್ದರೂ, ಸಿನಿಮಾಗಳಿಗೆ ಹಿನ್ನೆಲೆ ಸಂಗೀತ ನೀಡುವಾಗ ಈಗಲೂ ಸಾಕಷ್ಟು ಎಚ್ಚರ– ಶ್ರದ್ಧೆ ವಹಿಸುತ್ತಾರೆ. ರಜನಿಕಾಂತ್ ಅವರ 'ಕೋಚಡ್ಯೆಯನ್' ಸಿನಿಮಾಕ್ಕೆ ಸಂಗೀತ ನೀಡಲು ಅವರು ಮೊದಲು ಒಪ್ಪಿರಲಿಲ್ಲ. ಬಳಿಕ ಒಪ್ಪಿದರೂ ಅದಕ್ಕಾಗಿ ಒಂದು ವರ್ಷ ತೆಗೆದುಕೊಂಡರು. ಅದರಲ್ಲಿ ಒಂದು ಯುದ್ಧದ ದೃಶ್ಯದಲ್ಲಿ 150 ಜನರು ಒಟ್ಟಿಗೇ ಕೂಗುವ ಸ್ವರವೊಂದಿದೆ. ರೆಹಮಾನ್ ಸ್ವತಃ ಕೋಟೆಯ ಬಳಿಗೆ ಹೋಗಿ, ನೂರೈವತ್ತು ಜನರನ್ನು ಅಲ್ಲಿ ಒಟ್ಟಾಗಿ ಕೂಗಿಸಿ, ಧ್ವನಿ ಪ್ರತಿಧ್ವನಿಗಳನ್ನು ಆಲಿಸಿ, ಬಳಿಕ ಸ್ಟುಡಿಯೋಗೆ ಬಂದು ರೆಕಾರ್ಡಿಂಗ್ ಮಾಡಿಸಿದರಂತೆ!

ಸದ್ಯಕ್ಕೆ ರೆಹಮಾನ್ ಇಡೀ ಕುಟುಂಬವೇ ಸಂಗೀತಮಯ. ಅಕ್ಕ ರೆಹೀನಾ ಮೊದಲು ಹಿನ್ನೆಲೆ ಗಾಯಕಿಯಾಗಿ ಈಗ ಸಂಗೀತ ನಿರ್ದೇಶಕಿಯೂ ಆಗಿದ್ದಾರೆ. ಅಕ್ಕನ ಮಗ ಜಿ.ವಿ.ಪ್ರಕಾಶ್ ಕುಮಾರ್ ಕೂಡಾ ಸಂಗೀತ ನಿರ್ದೇಶಕ. ಇಬ್ಬರು ತಂಗಿಯರೂ ರೆಕಾರ್ಡಿಂಗ್ ಸ್ಟುಡಿಯೊ ಹೊಂದಿದ್ದಾರೆ. ಮೊದಲ ಮಗಳು ಖತೀಜಾ 'ಎಂದಿರನ್' ಚಿತ್ರದಲ್ಲಿ 'ಪುದಿಯ ಮನಿದಾ' ಹಾಡಿದ್ದು ಜನಪ್ರಿಯವಾಯಿತು. ಮೂರು ಮಕ್ಕಳಲ್ಲಿ ಕೊನೆಯಾತ ಅಮೀನ್, 'ಕಪಲ್ಸ್ ರಿಟ್ರೀಟ್' ಚಿತ್ರದಲ್ಲಿ ಹಾಡಿದ 'ನಾನಾ' ಹಾಡೂ ಹೆಸರು ತಂದಿತು. ಜಾಜ್, ರಾಕ್, ಕ್ಲಾಸಿಕಲ್, ಜಾನಪದ– ಹೀಗೆ ಎಲ್ಲದರ ಮಿಶ್ರಣದಿಂದ ಹೊಸ ಪ್ರಯೋಗಗಳನ್ನು ಮಾಡುವ ರೆಹಮಾನ್, ಕಳೆದ ವಾರ ದುಬೈನಲ್ಲಿ ಸೂಫಿ ಸಂಗೀತೋತ್ಸವದಲ್ಲಿ ಇಡೀ ರಾತ್ರಿ ಕಾರ್ಯಕ್ರಮ ನೀಡಿ ಪ್ರೇಕ್ಷಕರನ್ನು ಹುಚ್ಚೆಬ್ಬಿಸಿದ್ದಾರೆ. ಈ ಸಲವೂ ಆಸ್ಕರ್ ಸ್ಪರ್ಧೆಯಲ್ಲಿರುವ ಬಗ್ಗೆ ಅಲ್ಲಿನ ಪತ್ರಕರ್ತರು ಪ್ರಶ್ನಿಸಿದಾಗ, 'ಆ ಬಗ್ಗೆ ರೋಮಾಂಚನವೇನಿಲ್ಲ. ಎಲ್ಲವೂ ದೇವರ ದಯೆ. ಅದೃಷ್ಟ ಇದ್ದರೆ ಮತ್ತೆ ಆಸ್ಕರ್ ಸಿಗಬಹುದು. ನನಗಿಂತ ಪ್ರತಿಭಾವಂತ ಹಾಗೂ ಹಿರಿಯ ಸಂಗೀತ ಯೋಜಕರಿಗೇ ಇನ್ನೂ ಆಸ್ಕರ್ ಸಿಗದಿರುವ ಉದಾಹರಣೆಗಳಿವೆ' ಎಂದು ವಿನಯ ಪ್ರದರ್ಶಿಸಿದ್ದಾರೆ! ■

Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65